**ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ.424/2023**

| ಪಿರ್ಯಾದಿದಾರರುಃ | ವಿರುದ್ಧ | ಆರೋಪಿ |
|---|---|---|
| ಸರಕಾರದ ಪರವಾಗಿ ಹರಿಹರ ಗ್ರಾಮಾಂತರ ಪೋಲಿಸ್ ಠಾಣೆ | | ಎಸ್.ಸುರೇಶ, ಮ್ಯಾನೇಜರ್, ಆಕಾಶ್ ರೈಸ್ ಇಂಡಸ್ಟ್ರೀಸ್, ಮಲೇಬೆನ್ನೂರು ರಸ್ತೆ, ಮಿಟ್ಲಕಟ್ಟೆ ಗ್ರಾಮ, ಹರಿಹರ ತಾಲ್ಲೂಕು. |

ದಂಡ ಪ್ರಕ್ರಿಯಾ ಕಲಂ **313** ರ ಅಡಿ ಆರೋಪಿತನ ಹೇಳಿಕೆ

ಪ್ರಶ್ನೆಃ 1 ನ್ಯಾಯಾಲಯದ ಮುಂದೆ ಅಭಿಯೋಜನೆಯ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ?

ಉತ್ತರಃ

ಪ್ರಶ್ನೆಃ 2 ಫ್ರಾಸಾ.1 ಚಿನ್ಮಯಿ ತೊರಗಲ್ಲ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 08.02.2023 ರಂದು ಎಲೆಕ್ಟ್ರಾನಿಕ್ ಮಿಡಿಯಾದಲ್ಲಿ ಮಿಟ್ಲಕಟ್ಟೆ ಗ್ರಾಮದ ಆಕಾಶ್ ರೈಸ್ ಇಂಡಸ್ಟ್ರೀಸ್ ನಲ್ಲಿ ಒಬ್ಬ ವ್ಯಕ್ತಿ ವಿದ್ಯುಚ್ಛಕ್ತಿ ತಗುಲಿ ಸಾವು ಸಂಭವಿಸಿದೆ ಎಂದು ಟಿವಿ ಮಾಧ್ಯಮದಲ್ಲಿ ಬರುತ್ತಿದ್ದನ್ನು ನೋಡಿ, ಮಾರನೆ ದಿನ ದಿನಾಂಕಃ 09.02.2023 ರಂದು ಸಂಜೆ 4.00 ಗಂಟೆ ಸುಮಾರಿಗೆ ಕಾರ್ಖಾನೆ ಪರಿವೀಕ್ಷಣೆಯನ್ನು ಕೈಗೊಂಡಿರುವುದಾಗಿ, ಆ ಕಾಲಕ್ಕೆ ಚಾಸಾ. 3 ರವರು ತನ್ನ ಜೊತೆ ಹಾಜರಿದ್ದು, ಅಪಘಾತ ಸಂಭವಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿ ತನಗೆ ತೋರಿಸಿ, ಸಂದೀಪ್ ಎನ್ನುವ ವ್ಯಕ್ತಿಯು ಮಧ್ಯಾಹ್ನ 2.15 ರ ವೇಳೆಗೆ ಬೊರವೆಲ್ ಬಟನ್ ನ್ನು ಸ್ವಿಚ್ ಆನ್ ಮಾಡಲು, ಕಾರ್ಖಾನೆಯ ಹಿಂಭಾಗದಲ್ಲಿರುವ ಕಿಟಕಿಯ ಮುಲಕ ಕೈ ಹಾಕಿದಾಗ, ಒಂದು ವೈರ್ ಕಿಟಕಿಯ ಕಬ್ಬಿಣದ ಸಳಿಗೆ ತಗುಲಿ, ವಿಧ್ಯತ್ ಹರಿಯುತ್ತಿದು, ಸದರಿ ಕಬ್ಬಿಣ ಸಳಿಗೆ ಸಂದೀಪ್ ನ ಕೈ ತಗುಲಿದ್ದು, ಆಗ ಸದರಿ ವಿದ್ಯುತ್ ಸಂಪರ್ಕದಿಂದ ಸಂದೀಪನಿಗೆ ವಿಧ್ಯತ್ ತಗುಲಿ ಸಾವನ್ನಪ್ಪಿರುತ್ತಾರೆ ಎಂದು ಮಾಹಿತಿಯನ್ನು ನೀಡಿದ್ದು, ನಂತರ ಚಾಸಾ.3 ರವರು ಸದರಿ ಅವಘಡವನ್ನು ನೋಡಿದ ಒಬ್ಬ ಪ್ರತ್ಯಕ್ಷ ಸಾಕ್ಷಿ ಇದ್ದು, ಅವರು ತಾವು ಹೋದ ಸಮಯದಲ್ಲಿ ಇರಲಿಲ್ಲ. ನಂತರ ಅದೇ ಸಮಯದಲ್ಲಿ ಚಾಸಾ.3 ರವರಿಗೆ ಸ್ಥಳ ಪರಿಶೀಲನಾ ವರದಿಯನ್ನು ನೀಡಿರುವುದಾಗಿ ದಿಃ 01.03.2023 ರಂದು ಪುನಃ ಕಾರ್ಖಾನೆಗೆ ಭೇಟಿ ನೀಡಿ, ಚಾಸಾ.2 ರವರ ಹೇಳಿಕೆಯನ್ನು ಪಡೆದಿರುವುದಾಗಿ, ಕಾರ್ಖಾನೆ ಆಡಳಿತ ವರ್ಗದವರು ಪಾರಂ. 17 ನ್ನು ನಮ್ಮ ಕಛೇರಿಗೆ ಸಲ್ಲಿಸಿದ್ದು, ನಂತರ ಪೋಲಿಸರಿಂದ ಮೃತ ಸಂದೀಪ್ ನ ಪಿ ಎಂ ವರದಿಯನ್ನು ಮತ್ತು ಪ್ರ.ವ. ವರದಿಯನ್ನು ಪಡೆದಿದ್ದು, ನಂತರ ಸ್ಥಳ ಪರಿಶೀಲನೆ ಮತ್ತು ಕಾರ್ಖಾನೆಯವರು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಸದರಿ ಅವಘಡವು ಯಾವ ರೀತಿ ಆಯಿತು ಮತ್ತು ಹೇಗೆ ಆಯಿತು ಮತ್ತು ಇದರಲ್ಲಿ ಕಾರ್ಖಾನೆಯ ಯಾವುದಾದರು ನಿಯಮಗಳ ಉಲ್ಲಂಘನೆ ಆಗಿದೆಯಾ ಎಂದು ಪರಿಶೀಲನೆ

ಮಾಡಿದಾಗ, ಕಾರ್ಖಾನೆಯು ನಿಯಮಗಳು ಉಲ್ಲಂಘನೆ ಮಾಡಿದ ಬಗ್ಗೆ ತಿಳಿದು ಬಂದಿದ್ದು, ದಿಃ 31.03.2023 ರಂದು ಕಾರ್ಖಾನೆಯ ಅನುಭೋಗದಾರರು ಮತ್ತು ವ್ಯವಸ್ಥಾಪಕರು ಆದ ಸುರೇಶ್ ದವರಿಗೆ ಉಲಂಘನೆಗೆ ಸಂಬಂಧಿಸಿದಂತೆ ನೋಟಿಸ್ ನ್ನು ಜಾರಿ ಮಾಡಿರುತ್ತೇನೆ. ಜರುಗಿಸಿರುತ್ತಾರೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆಃ 3 ಫ್ರಾಸಾ.1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕ 24.04.2023 ರಂದು ಸದರಿ ನೋಟಿಸ್ ಗೆ ಸುರೇಶ್ ರವರು ಉತ್ತರ ನೀಡಿರುವುದಾಗಿ, ಸದರಿ ಅವಘಡದಿಂದ ಮೃತ ಪಟ್ಟ ಸಂದೀಪನ ಕುಟುಂಬಕ್ಕೆ ತಾವು ಪರಿಹಾರ ನೀಡಿರುತ್ತೇವೆ ಎಂದು ದಾಖಲೆಗಳನ್ನು ಹಾಜರುಪಡಿಸಿರುವುದಾಗಿ, ನಂತರ ಆರೋಪಿಯು ನೀಡಿದ ಉತ್ತರವು ಅವರು ಮಾಡಿದ ಉಲ್ಲಂಘನೆ ಮತ್ತು ನೀಡಿರುವ ಪರಿಹಾರಕ್ಕೆ ಸಮಂಜಸ ಇರಲಿಲ್ಲ ಎಂದು ಅಭಿಪ್ರಾಯ ಪಟ್ಟು ಆದೇಶ ಮಾಡಿರುವುದಾಗಿ, ದಿನಾಂಕಃ 27.04.2023 ರಂದು ಮಾನ್ಯ ನ್ಯಾಯಾಲಯದ ಮುಂದೆ ಆರೋಪಿತನು ಮಾಡಿರುವ ಕೃತ್ಯವು ಕಾರ್ಖಾನೆ ಕಾಯ್ದೆ ಅಡಿಯಲ್ಲಿ ಉಲ್ಲಂಘನೆ ಎಂದು ಆರೋಪಿಸಿ, ಆರೋಪಿ ವಿರುದ್ಧ ದೂರು ನೀಡಿರುವುದಾಗಿ, ಚಾಸಾ.2 ರವರ ಹೇಳಿಕೆಯ ಪ್ರಕಾರ ಸಂದಿಪ್ ಎನ್ನುವವರು ಸದರಿ ಕಾರ್ಖಾನೆಯಲ್ಲಿ ಆಪರೇಟರ್ ಆಗಿ ಕೆಲಸ ಮಾಡುತ್ತಿದ್ದು, ದಿನಾಂಕಃ 07.02.2023 ರಂದು ಬೆಳಿಗ್ಗೆ 10.00 ಗಂಟೆಗೆ ಕಾರ್ಖಾನೆಗೆ ಕೆಲಸಕ್ಕೆ ವರದಿ ಮಾಡಿಕೊಂಡಿರುವುದಾಗಿ, ಮಧ್ಯಾಹ್ನ 2.15 ಗಂಟೆ ಸಮಯದಲ್ಲಿ ಕಾರ್ಖಾನೆಯ ಹಿಂಭಾಗ ಡ್ರೈಯರ್ ವಿಭಾಗದ ಹಿಂದೆ ಹೋದಾಗ, ಬೋರ್ ವೆಲ್ ನಿಂದ ನೀರನ್ನು ತೆಗೆಯಲು ಕಿಟಕಿಯ ಮೂಲಕ ಬೋರ್ವೆಲ್ ನ ಸ್ವಿಚ್ ಆನ್ ಮಾಡಲು ಹೋದಾಗ,ಬೋರ್ ವೆಲ್ ನಿಂದ ನೀರನ್ನು ತೆಗೆಯಲು ಕಿಟಕಿಯ ಮೂಲಕ ಬೋರ್ವೆಲ್ ನ ಸ್ವಿಚ್ ಆನ್ ಮಾಡಲು ಹೋದಾಗ, ಏಕಾಏಕಿ ಜೋರಾಗಿ ಕಿರುಚಿದ್ದು, ಆಗ ಚಾಸಾ.2 ರವರು ವೆ ಬ್ರಿಡ್ಜ್ ಹತ್ತಿರ ಊಟ ಮಾಡುತ್ತಿದ್ದರು. ಕೂಡಲೆ ಏನಾಯಿತು ಎಂದು ನೋಡಲು ಹೋದಾಗ, ಡ್ರೆಯರ್ ವಿಭಾಗದ ಕೆಲಸಗಾರರಾದ ಮಧುಕುಮಾರ ಮತ್ತು ರಾಜು ರವರು ಮೂರ್ಚೆ ಹೋದ ಸ್ಥಿತಿಯಲ್ಲಿ ಸಂದಿಪ್ ರವರನ್ನು ಎತ್ತಿಕೊಂಡು ಬರುತ್ತಿದ್ದರು. ನಂತರ ಅವರನ್ನು ದಾವಣಗೆರೆ ಚಿಗಟೇರಿ ಆಸ್ಪತ್ರೆಗೆ ದಾಖಲಿಸಲು ತೆಗೆದುಕೊಂಡು ಹೋದಾಗ, ಅವರಿಗೆ ಅಲ್ಲಿನ ವೈದ್ಯರು ಮೃತಪಟ್ಟಿರುತ್ತಾರೆ ಎಂದು ತಿಳಿಸಿದ್ದು, ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ, ಸದರಿ ಸ್ಥಳ ಪರಿಶೀಲನಾ ವರದಿಯನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 1(ಎ), ಚಾಸಾ.2 ಹೇಳಿಕೆಯನ್ನು ನಿಪಿ.2 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.2(ಎ) ಎಂದು, ಫಾರಂ ನಂ. 17 ನ್ನು ನಿಪಿ.3 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.3(ಎ) ಎಂದು, ಕಾರಣ ಕೇಳಿ ನೋಟಿಸನ್ನು ನಿಪಿ.4 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.4(ಎ) ಎಂದು, ಅಂಚೆ ಸ್ವೀಕೃತಿ ನಿಪಿ.5 ಆರೋಪಿ ನೀಡಿದ ಉತ್ತರವನ್ನು ನಿಪಿ.6 ಎಂದು, ಕಚೇರಿ ಆದೇಶವನ್ನು ನಿಪಿ.7 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು. ಸ್ಥಳ ಪರಿಶೀಲನೆಗೆ ಸಮಯದಲ್ಲಿ ತೆಗೆದ 3 ಪೋಟೊಗಳನ್ನು ನಿಪಿ.8 ರಿಂದ 10 ಎಂದು, ಅದಕ್ಕೆ ಸಂಬಂಧಿಸಿದ ಸಿಡಿಯನ್ನು ನಿಪಿ.11 ಎಂದು ಗುರುತಿಸಲಾಯಿತು. ಪತ್ರವನ್ನು ನಿಪಿ.12

ಎಂದು, ಅದರಲ್ಲಿರುವ ಸಹಿಯನ್ನು ನಿಪಿ.12(ಎ) ಎಂದು ಅಯಿತು. ಸದರಿ ದೂರನ್ನು ನಿಪಿ.13 ಎಂದು, ಅದರಲ್ಲಿರುವ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಪೋಲಿಸರಿಂದ ಪಡೆದುಕೊಂಡ ದೂರು, ಪ್ರ.ವ. ವರದಿಯನ್ನು ಮತ್ತು ದಿಃ 11.02.2023 ರಂದು ಜರುಗಿಸಿದ ಕೃತ್ಯ ಸ್ಥಳ ಮತ್ತು ಅಮಾನತ್ತು ಪಂಚನಾಮೆ, ಮೃತ ಸಂದೀಪನ ಪಿ.ಎಂ ವರದಿಗಳ ದೃಢಿಕೃತ ನಕಲು ಪ್ರತಿಗಳನ್ನು ನಿಪಿ.14 ಎಂದು ಗುರುತಿಸುತ್ತೇನೆ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆಃ 4 ನೀವು ಏನನ್ನಾದರೂ ಹೇಳಬಯಸುವಿರಾ?

ಉತ್ತರಃ

ಪ್ರಶ್ನೆಃ 5 ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ?

ಉತ್ತರಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ/-

ದಿನಾಂಕಃ 20.11.2025 ಪ್ರಧಾನ ಸಿವಿಲ್ ನ್ಯಾಯಾಧೀಶರು

ಸ್ಥಳಃ ಹರಿಹರ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ.